ಓ ಎಸ್ ನಂಃ 17/2017

ಪಿ. ಡಬ್ಲ್ಯೂ ಃ 2

ದಿಃ 6.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ ಎನ್ ವಿ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಕೆ ಎಸ್ ಪಿ ವಕೀಲರಿಂದ ಃ

ಈ ದಿನ ನನ್ನನ್ನು ಹನುಮಂತಯ್ಯ ಇವರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ. ಜಮೀನು ವಿಚಾರಕ್ಕಾಗಿ ಸಾಕ್ಷಿ ಹೇಳಲು ಕರೆದುಕೊಂಡು ಬಂದಿದ್ದಾರೆ. ನಾನು ಮತ್ತು ವಾದಿಗಳು ಬಂಧುಗಳಲ್ಲ. ಒಂದೇ ಜಾತಿಯವರು. ನಾವು ಮತ್ತು ವಾದಿಗಳು ಚೆನ್ನಾಗಿದ್ದೇವೆ. ಜಯಮ್ಮ ಇವರು ಗೊತ್ತು. ಅವರು ಹನುಮಂತಯ್ಯ ಇವರ ಹೆಂಡತಿ ಇರುತ್ತಾರೆ. ಅವರು ಬದುಕಿದ್ದಾರೆ. ವಾದಿಯು ಭೂಮಿ ವಿಚಾರಕ್ಕಾಗಿ ದಾವೆ ಮಾಡಿದ್ದಾರೆ. ಆದರೆ ಸ.ನಂಬರ್ ಗೊತ್ತಿಲ್ಲ. ಕೇಸ್ ನ್ನು ವಾದಿಗಳು ರಾಮ ಇವರ ವಿರುದ್ದ ಹಾಕಿದ್ದಾರೆ . ನಾನು ರಾಮನನ್ನು ನೋಡಿಲ್ಲ. ಒಟ್ಟು 5 ಎಕರೆ 12 ಗುಂಟೆಗಾಗಿ ದಾವೆ ಮಾಡಿದ್ದಾರೆ. ದಾವೆ ಹಾಕಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಿಕೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನಗೆ ದಾವೆಯ ಯಾವುದೆ ವಿಷಯ ಗೊತ್ತಿಲ್ಲದೆ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯಾಗಲಿ ಅಥವಾ ಅವರ ಹೆಂಡತಿ ಮಕ್ಕಳಾಗಲಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಎಂದರೆ ಸರಿಯಲ್ಲ. ಅದು ಸರ್ಕಾರಿ ಸ್ವತ್ತು ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.